ಮಾರ್ಕ್ಸ್ ಗೊತ್ತು. ಆದರೆ ಡೀಪಾಗಿ ಸ್ಟಡಿ ಮಾಡಿಲ್ಲ. ಶೇಕ್ಸ್‌ಪಿಯರ್, ಜಾನ್ ಕೀಟ್ಸ್, ವರ್ಡ್ಸ್‌ವರ್ತ್ ಮುಂತಾದವರ ಬಗ್ಗೆ ತುಂಬಾ ಚೆನ್ನಾಗಿ ಗೊತ್ತು' ಎಂದು ಸಹಜವಾಗಿಯೇ ಹೇಳಿದವನು ಐದು ನಿಮಿಷಗಳ ಕಾಲ ತನ್ನ ತಾತ, ತಂದೆ ಹಾಗೂ ಉದ್ದಿಮೆ, ವ್ಯವಹಾರಗಳ ಬಗ್ಗೆ ಸಂಕ್ಷಿಪ್ತವಾಗಿ ಹೇಳಿದ್ದ.

'ಓಹ್, ದೊಡ್ಡ ಶ್ರೀಮಂತ ಕುಟುಂಬದಲ್ಲಿ ಹುಟ್ಟಿದ್ದರೂ ನಿಮ್ಮ ಸಿಂಪ್ಲಿಸಿಟಿ ತುಂಬಾ ಮೆಚ್ಚುವಂಥದ್ದು' ಅವಳ ಮೆಚ್ಚುಗೆಯ ಮಾತುಗಳ ಛಾಯೆ ಕಣ್ಣಲ್ಲೂ ಪ್ರಕಟವಾಗಿತ್ತು.

'ನೀವು ಲೆಕ್ಚರರ್ ಆಗಿದ್ದರೂ ರಾತ್ರಿ ಬಾರ್‌ನಲ್ಲಿ ಡ್ಯಾನ್ಸ್ ಮಾಡುತ್ತಿದ್ದೀರಿ' ಕುತೂಹಲ ತಡೆಯಲಾರದೆ ಕೇಳಿದ್ದ.

'ಮುಂಬಯಿ ಇಂಡಿಯಾದ **financial capital**. ಇಲ್ಲಿ ಅತ್ಯಂತ ದೊಡ್ಡ ಶ್ರೀಮಂತರಿಂದ ಅತ್ಯಂತ ಕಡು ಬಡವರೂ ಬದುಕಿಗಾಗಿ ದುಡಿಯುತ್ತಲೇ ಇರುತ್ತಾರೆ. ನಾವಿಂದು ಹಣದ ಪ್ರಪಂಚದಲ್ಲಿ ವಾಸಿಸುತ್ತಿದ್ದೇವೆ. ಬೆಳಿಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೂ ಹಣದ ಅವಶ್ಯಕತೆ ಅನಿವಾರ್ಯವಾಗಿಬಿಟ್ಟಿದೆ. ಪ್ರತಿಯೊಬ್ಬ ಮನುಷ್ಯ ಪ್ರತಿಕ್ಷಣ ಹಣದ ಬಗ್ಗೆಯೇ ಚಿಂತಿತನಾಗಿರುತ್ತಾನೆ. ಲಿವರ್ ಡ್ಯಾಮೇಜ್ ಆಗಿ ಅಪ್ಪನನ್ನು ಲೀಲಾವತಿ ಆಸ್ಪತ್ರೆಗೆ ಸೇರಿಸಿದ್ದೀವಿ. ದಿನ ಬಿಟ್ಟು ದಿನ ಡಯಾಲಿಸಿಸ್ ಮಾಡಬೇಕು. ವಾರಕ್ಕೆ ಇಪ್ಪತ್ತು ಸಾವಿರ ಕಟ್ಟಬೇಕು. ಬೆಡ್ ಚಾರ್ಜ್ ಹಾಗೂ ಮೆಡಿಸಿನ್ ಖರ್ಚನ್ನು ಮಫತ್ಲಾಲ್ ಕಂಪನಿಯವರೇ ವಹಿಸಿಕೊಂಡಿದ್ದಾರೆ...' ಅಷ್ಟರಲ್ಲಿ ಪಾವ್ ಬಾಜಿ, ಬಿಸಿ ಬಿಸಿ ಚಹಾ ಬಂದಿತ್ತು. ಅವಳು ಪಾವ್ ಬಾಜಿ ಬಾಯಿಗಿಟ್ಟುಕೊಂಡಿದ್ದಳು. ಅವಳನ್ನು ನೋಡುತ್ತಾ ಅವನೂ ತಿಂಡಿಗೆ ಕೈಯಿಟ್ಟು 'ಲಿವರ್ ಟ್ರಾನ್ಸ್‌ಪ್ಲಾಂಟ್ ಮಾಡಿಸಬಹುದಿತ್ತಲ್ಲ, ಮೆಡಿಕಲ್ ಟೆಕ್ನಾಲಜಿ ತುಂಬಾ ಡೆವಲಪ್ ಆಗಿದೆ' ಎಂದ.

'ಹೌದು, ಟೆಕ್ನಾಲಜಿ ತುಂಬಾನೇ ಡೆವಲಪ್ ಆಗಿದೆ. ಆದರೆ ಎಲ್ಲವೂ ದುಡ್ಡಿದ್ದವರಿಗೆ ಮಾತ್ರ ದಕ್ಕುವುದು. ಇಂಡಿಯಾದಲ್ಲಿ ಡೆಮಾಕ್ರಸಿ ಹೇಳಿಕೊಳ್ಳಲು ಮಾತ್ರ ಇದೆ. ನಮ್ಮ ದೇಶವನ್ನು ವೆಲ್‌ಫೇರ್ ಸ್ಟೇಟ್ ಎಂದು ಕರೆಯುತ್ತೇವೆ. ಆದರೆ ಪಬ್ಲಿಕ್ ಹೆಲ್ತ್ ಹಾಗೂ ಪಬ್ಲಿಕ್ ಎಜುಕೇಶನ್ ತುಂಬಾ ಹದಗೆಟ್ಟಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಕನಿಷ್ಠ ಗುಣಮಟ್ಟದ ವೈದ್ಯಕೀಯ ಸೌಲಭ್ಯಗಳೂ ಸಾಮಾನ್ಯ ಜನರಿಗೆ ದಕ್ಕುತ್ತಿಲ್ಲ. ಇನ್ನು ಸರ್ಕಾರಿ ಶಾಲಾ ಕಾಲೇಜುಗಳ ಪರಿಸ್ಥಿತಿಯಂತೂ ಹೇಳತೀರದು. ಈ ಎಲ್ಲದರ ಅನುಭವ ಸಾಮಾನ್ಯ ಮತ್ತು ಬಡಜನರಿಗೆ ಮಾತ್ರ ತಿಳಿದಿರುತ್ತದೆ. ಬಿಡಿ, ಈಗ ಅವುಗಳ ಚರ್ಚೆ ಏಕೆ? ನನಗೆ ಕ್ಲಾಸಿಗೆ ಟೈಮಾಗುತ್ತಿದೆ. ನನ್ನ ನೋಡಲು ಬಂದಿರುವುದರಿಂದ ಬಿಲ್ಲನ್ನು ನಾನೇ ಕೊಡುತ್ತೇನೆ' ಎಂದು ವ್ಯಾನಿಟಿ ಬ್ಯಾಗಿನಲ್ಲಿದ್ದ ಪರ್ಸನ್ನು ಹೊರತೆಗೆದಿದ್ದಳು. ಆಸ್ಕರ್ ವೈಲ್ಡ್ ಅವಳ ಕೈಹಿಡಿದು ತಡೆದು ತಾನೇ ಬಿಲ್ಲಿನ ಹಣವನ್ನು ಕೊಟ್ಟಿದ್ದ. ಅವಳ ಕೈ ಸ್ಪರ್ಶ ತುಂಬಾ ಹಿತವಾಗಿತ್ತು.

'ನಿಮ್ಮ ಬಳಿ ತುಂಬಾ ಮಾತನಾಡುವುದಿದೆ, ದಯವಿಟ್ಟು ಒಂದೆರಡು ಗಂಟೆ ಬಿಡುವು ಮಾಡಿಕೊಳ್ಳುತ್ತೀರಾ?' ರಿಕ್ವೆಸ್ಟ್ ಮಾಡಿಕೊಂಡಿದ್ದ.

'ನನ್ನ ಮನೆ ಮಾತುಂಗದಲ್ಲಿರುವುದು. ನಾನು ರಾತ್ರಿ ಲೀಲಾವತಿ ಆಸ್ಪತ್ರೆಯ ಅಟೆಂಡರ್ಸ್ ಲಾಂಜ್‌ನಲ್ಲಿ ಕಾಲ ಕಳೆದು, ಬೆಳಿಗ್ಗೆ ಮನೆಗೆ ಬಂದು ರೆಡಿಯಾಗಿ ಕಾಲೇಜಿಗೆ ಬಂದರೆ ಮತ್ತೆ ಮೂರೂವರೆಗೆ ಮನೆ ತಲುಪುತ್ತೇನೆ. ಒಂದೆರಡು ಗಂಟೆ ದೇಹಕ್ಕೆ ವಿಶ್ರಾಂತಿ ಬೇಕು. ಎಂಟು ಗಂಟೆಯಿಂದ ಒಂಬತ್ತೂವರೆಯವರೆಗೆ ಡ್ಯಾನ್ಸ್ ಬಾರ್. ತಕ್ಷಣ ಮತ್ತೆ ಲೀಲಾವತಿ ಆಸ್ಪತ್ರೆಗೆ ದೌಡಾಯಿಸಬೇಕು. ಮಧ್ಯಮ ಮತ್ತು ಬಡವರ್ಗದವರು ಶ್ರಮಪಡದಿದ್ದರೆ ಬದುಕು ನಡೆಯುವುದಿಲ್ಲ'. ಅವಳು ಅಕ್ಷರಗಳಲ್ಲಿ ತನ್ನ ಬದುಕನ್ನು ಹಿಡಿದಿಡುತ್ತಾ ಮುಂಬಯಿಯ ಬಡ ಮತ್ತು ಮಧ್ಯಮ ವರ್ಗದ ಜನರ ಬದುಕನ್ನು ಅವನ ಮುಂದೆ ಅನಾವರಣಗೊಳಿಸುತ್ತಿದ್ದಳು.

'ಇವತ್ತು ಡ್ಯಾನ್ಸ್ ಬಾರ್‌ಗೆ ರಜಾ ಹಾಕಿ ನನ್ನೊಂದಿಗೆ ಊಟಕ್ಕೆ ಬರಬಹುದಾ ನೀವು?' ಮಾತುಗಳಲ್ಲಿ ಬೇಡಿಕೆ ಇತ್ತು.

'ಅಪ್ಪನ ಡಯಾಲಿಸಿಸ್ ಖರ್ಚಿಗೆ ಡ್ಯಾನ್ಸ್ ಬಾರ್‌ನಿಂದ ಬರುವ ಹಣವನ್ನೇ ವಿನಿಯೋಗಿಸುತ್ತಿರುವುದು. ತಿಂಗಳಿನಿಂದ ಡ್ಯಾನ್ಸ್ ಬಾರ್‌ಗೆ ಹೋಗುತ್ತಿರುವುದು. ನಾನು ಕ್ಲಾಸಿಕಲ್ ಹಾಗೂ ಮಾಡರ್ನ್ ಡ್ಯಾನ್ಸ್ ಎರಡನ್ನೂ ಕಲಿತಿದ್ದೇನೆ. ಮನೆಯಲ್ಲಿ ಸುಮಾರು ಮಕ್ಕಳಿಗೆ ಡ್ಯಾನ್ಸ್ ಹೇಳಿಕೊಡುತ್ತಿದ್ದೆ. ಪರಿಚಯದವರೊಬ್ಬರು ಡೋರ್ ನಂಬರ್ ಒನ್ ಬಗ್ಗೆ ಹೇಳಿದರು. ಡ್ಯಾನ್ಸ್ ಬಾರುಗಳಲ್ಲಿ ಕೆಲಸ ಮಾಡುವ ಹುಡುಗಿಯರ ಕಥೆ ಕೇಳಿದರೆ ಎದೆ ನಡುಗುತ್ತದೆ. ಇರಲಿ, ಡ್ಯಾನ್ಸ್ ಬಾರ್ ಓನರ್ ಮತ್ತು ಮ್ಯಾನೇಜರ್ ಇಬ್ಬರೂ ಒಳ್ಳೆಯವರಿದ್ದಾರೆ. ಹುಡುಗಿಯರಿಗೆ ಬಂದ ಎಲ್ಲಾ ಟಿಪ್ಸನ್ನೂ ಅವರಿಗೇ ಹಂಚಿಬಿಡುತ್ತಾರೆ. ಹಾಗಾಗಿ ಅಲ್ಲಿ ಡ್ಯಾನ್ಸ್ ಮಾಡುವ ಯುವತಿಯರು ಮತ್ತು ಹೆಂಗಸರು ಮೆನ್ಸಸ್ ಆದ ದಿನಗಳಲ್ಲೂ ರಜಾ ತೆಗೆದುಕೊಳ್ಳದೆ ಬಂದು ಡ್ಯಾನ್ಸ್ ಮಾಡುತ್ತಾರೆ. ಸೋಲೊ ಡ್ಯಾನ್ಸ್ ನಾನೊಬ್ಬಳೇ ಪರ್ಫಾರ್ಮ್ ಮಾಡುವುದು ಅಲ್ಲಿ. ಎರಡು ತಿಂಗಳು ಒಂದು ದಿನವೂ ಮಿಸ್ ಮಾಡುವುದಿಲ್ಲವೆಂದು ಅವರಿಗೆ ಮಾತು ಕೊಟ್ಟಿದ್ದೇನೆ' ಅವಳು ಪ್ರಾಮಾಣಿಕವಾಗಿಯೇ ಮಾತನಾಡಿದ್ದಳು.

'ಅದರ ಓನರ್ ಹೈಸ್ಕೂಲಿನಲ್ಲಿ ನನ್ನ ಕ್ಲಾಸ್‌ಮೇಟ್ ಆಗಿದ್ದವನು. ನಾನವನಿಗೆ ಈಗಲೇ ಫೋನ್ ಮಾಡಿ ತಿಳಿಸುತ್ತೇನೆ' ಅವನು ಪಟ್ಟು ಬಿಡಲಿಲ್ಲ.

'ನಿಮಗೆ ನನ್ನಿಂದ ಮುಜುಗರ ಆಗುವುದು ಬೇಡ. ಈಗ ಭೇಟಿ ಆದೆವಲ್ಲ. ಇನ್ನೇನು ಮಾತನಾಡುವುದಿದೆ, ಇನ್ನೇಕೆ ನಾವು ಭೇಟಿಯಾಗಬೇಕು ಹೇಳಿ' — ಮಾತುಗಳು ನಿಷ್ಠುರವಾಗಿದ್ದರೂ ಸೌಮ್ಯತೆಯನ್ನು ಮೈತುಂಬಿಕೊಂಡಿದ್ದವು.

'ನನಗೆ ತುಂಬಾ ಮಾತನಾಡುವುದಿದೆ ನಿಮ್ಮೊಂದಿಗೆ. ತಿಳಿದುಕೊಳ್ಳುವುದಿದೆ ನಿಮ್ಮ ಬಗ್ಗೆ ಮತ್ತು ತಿಳಿಸುವುದೂ ಇದೆ ನನ್ನ ಬಗ್ಗೆ' ಕಾವ್ಯಮಯವಾಗಿ ಮಾತನಾಡಿದ್ದ.

'ಎಲ್ಲಿ, ಎಷ್ಟು ಹೊತ್ತಿಗೆ ಭೇಟಿಯಾಗೋಣ ಹೇಳಿ' ಅವಳ ಮಾತುಗಳಲ್ಲಿ ಒಪ್ಪಿಗೆಯಿತ್ತು.

'ನೀವು ಫಿಶ್ ತಿಂತೀರಾ?' ಎಂದು ಕೇಳಿದ್ದ ಒಡನೆಯೇ 'ನಾನು ನಾನ್ ವೆಜಿಟೇರಿಯನ್. ಆದರೆ ಮಟನ್, ಚಿಕನ್, ಫಿಶ್ ತಿನ್ನೋದು ಅಪರೂಪವೇ. ಏಕೆಂದರೆ, ಅಪ್ಪನಿಗೆ ಲಿವರ್ ಪ್ರಾಬ್ಲಂ ಶುರುವಾದಾಗಿನಿಂದ ಕಂಪ್ಲೀಟಾಗಿ ಡ್ರಿಂಕ್ಸ್ ಮತ್ತು ನಾನ್ ವೆಜ್ ಬಿಟ್ಟು ಬಿಟ್ಟಿದ್ದಾರೆ. ಹಾಗಾಗಿ ಅಮ್ಮ ಮನೆಯಲ್ಲಿ ನಾನ್ ವೆಜ್ ಮಾಡಲು ಹಿಂಸೆ ಪಟ್ಟುಕೊಳ್ಳುತ್ತಾರೆ. ನನಗೂ ನಾನ್ ವೆಜ್ ಬಗ್ಗೆ ಅಂಥ ಕ್ರೇಜ್ ಏನೂ ಇಲ್ಲ' ಅವಳ ಮಾತುಗಳಲ್ಲಿ ಪ್ರಾಮಾಣಿಕತೆ ತುಂಬಿತ್ತು.

'ನಾನು ವೆಜಿಟೇರಿಯನ್ ಆದರೂ ಆಗಾಗ ಸೀ ಫಿಶ್ ತಿಂತೀನಿ. ಇಂದು ನೀವು ಸರಿಯಾಗಿ ಎಂಟು ಗಂಟೆಗೆ ಜುಹೂವಿನ ಮಹೇಶ್ ಲಂಚ್ ಹೋಂಗೆ ಬನ್ನಿ. ಅಲ್ಲಿ ಮೀನಿನ ಊಟ ತುಂಬಾ ಚೆನ್ನಾಗಿರುತ್ತದೆ. ಊಟ ಮುಗಿದ ನಂತರ ನಿಮ್ಮನ್ನು ಲೀಲಾವತಿ ಆಸ್ಪತ್ರೆಗೆ ಬಿಟ್ಟು ಹೋಗ್ತೀನಿ' ಅಭಿಮಾನದಿಂದ ಮಾತನಾಡಿದ್ದ.

'ಮಲ್ಟಿ ಮಿಲಿನಿಯರ್ ವ್ಯಕ್ತಿಗಳು ಯಾರೂ ನನ್ನ ಗೆಳೆತನದ ಪರಿಧಿಯಲ್ಲಿ ಬಂದಿರಲಿಲ್ಲ. ನೀವು ಬಂದಿದ್ದೀರಿ. ಈ ಗೆಳೆತನವನ್ನು ಅಕ್ಸೆಪ್ಟ್ ಮಾಡಿಕೊಳ್ಳಬೇಕೋ ಬೇಡವೋ ಎಂದು ನನ್ನ ಮನಸ್ಸಿನಲ್ಲಿ ಈ ಕ್ಷಣಕ್ಕೂ ಹೊಯ್ದಾಟ ನಡೆಯುತ್ತಿದೆ. ಇದು ನಾನು ಅರ್ಥಶಾಸ್ತ್ರದೊಂದಿಗೆ ಕಾರ್ಲ್ ಮಾರ್ಕ್ಸ್‌ನನ್ನು ಸೀರಿಯಸ್ಸಾಗಿ ಓದಿದ ಕಾರಣದಿಂದಿರಬೇಕು.'

ಇನ್ನೂ ಅವಳ ಮಾತುಗಳು ಮುಗಿದಿರಲಿಲ್ಲ, ಆಸ್ಕರ್ ವೈಲ್ಡ್ ತುಸು ಡಿಸ್ಟರ್ಬ್ ಆಗಿ 'ಸಿದ್ಧಾಂತಗಳಿಗೂ ಗೆಳೆತನಕ್ಕೂ ತಳಕು ಹಾಕಬೇಡಿ. ನನ್ನಲ್ಲಿ ಅಂಥ ಸುಪೀರಿಯಾರಿಟಿ ಕಾಂಪ್ಲೆಕ್ಸ್ ಖಂಡಿತವಾಗಿಯೂ ಇಲ್ಲ. ನಾನು ಡ್ಯಾನ್ಸ್ ಬಾರ್‌ಗೆ ಯಾವತ್ತೂ ಹೋದವನಲ್ಲ. ನನ್ನ ಸ್ನೇಹಿತ ಅದನ್ನು ನಡೆಸುತ್ತಿರುವುದಾಗಿ ಕೆಲವು ದಿನಗಳ ಹಿಂದೆಯೇ ಆಹ್ವಾನಿಸಿದ್ದ. ನಾನು ಹೋಗಿರಲಿಲ್ಲ. ಆದರೆ ವಾರದ ಹಿಂದೆ ನಡೆದ ಘಟನೆಯೊಂದರಿಂದಾಗಿ ಮನಸ್ಸಿಗೆ ನೋವಾಗಿ ಡೋರ್ ನಂಬರ್ ಒನ್ ಪ್ರವೇಶಿಸಿದ್ದೆ. ಅಲ್ಲಿ ನೀವು ಕಣ್ಣಿಗೆ ಬಿದ್ದಿರಿ. ವಾರಪೂರ್ತಿ ನಾನು ನಿಮ್ಮ ಡ್ಯಾನ್ಸ್ ನೋಡುವುದಕ್ಕಾಗಿಯೇ ಬರುತ್ತಿದ್ದೆ. ಏಕೋ ಏನೋ ತುಂಬಾನೇ ಇಷ್ಟವಾದಿರಿ. ಹಾಗಾಗಿ ನಿಮ್ಮೊಂದಿಗೆ ಮಾತನಾಡಬೇಕೆಂದು ಮ್ಯಾನೇಜರ್‌ಗೆ ತಿಳಿಸಿದೆ.' ಅವನ ಮಾತುಗಳಲ್ಲಿ ಈಗ ಭಾವುಕತೆ ತುಂಬಿಕೊಂಡಿತ್ತು. ಅದು ಅವನ ಬಗ್ಗೆ ಅವಳಲ್ಲಿ ನಂಬಿಕೆ ಬರುವಂತೆ ಮಾಡಿತ್ತು.

ಎಂಟು ಗಂಟೆಗೆ ಇನ್ನೂ ಹತ್ತು ನಿಮಿಷ ಇರುವಂತೆಯೇ ಆಸ್ಕರ್ ವೈಲ್ಡ್ ಜುಹೂವಿನ ಮಹೇಶ್ ಲಂಚ್ ಹೋಂ ಪ್ರವೇಶಿಸಿದ್ದ. ಅವನಿಗೆ ಅಚ್ಚರಿಯಾಗುವಂತೆ ಬೃಂದಾ ರಾಥೋಡ್ ಆಗಲೇ ಅಲ್ಲಿ ಕುಳಿತಿದ್ದಳು.

(ಸಶೇಷ)